DECEMBER 09, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಗ್ರಾಮೋದ್ಯೋಗ ಹಾಗೂ ಸ್ವದೇಶಿ ವಸ್ತ್ರ ಖಾದಿಯಿಂದ ತಯಾರಿಸಿದ, ದೇಶದ ಎರಡನೇ ಅತೀ ದೊಡ್ಡ, 48 ಅಡಿ ಅಗಲ 72 ಅಡಿ ಉದ್ದದ ಭಾರತದ ರಾಷ್ಟ್ರ ಧ್ವಜವನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಳಗಾವಿಯ, ಸುವರ್ಣ ವಿಧಾನಸೌಧದ, ಭವ್ಯ ಮೆಟ್ಟಿಲುಗಳ ಮೇಲೆ ಇಂದು ಬೆಳಗ್ಗೆ, ಅನಾವರಣ ಮಾಡಿ, ಪ್ರದರ್ಶನಕ್ಕೆ ಅಣಿಗೊಳಿಸಿದರು. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ವಿಧಾನ ಪರಿ ೕತ್ ಸಭಾಪತಿ ಬಸವರಾಜ ಹೊರಟ್ಟಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ ಸೇರಿದಂತೆ, ಸಚಿವರು ಹಾಗೂ ಶಾಸಕರು ಭಾಗವಹಿಸಿದ್ದರು.

<><><>

ಕಲಬುರ್ಗಿ ಜಿಲ್ಲೆ, ಕಮಲಾಪುರದ, ವಿನೋದಕುಮಾರ ರೇವಪ್ಪ ಬಮ್ಮನ್ನ ಕುಟುಂಬಸ್ಥರು, ಬಹು ಆಸ್ಥೆಯಿಂದ, ಈ ಬೃಹತ್ ಗಾತ್ರದ, ರಾಷ್ಟ್ರ ಧ್ವಜವನ್ನು ಮಾಡಿಸಿದ್ದಾರೆ.

<><><>

ವಿನೋದಕುಮಾರ ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ವಿನೋದಕುಮಾರ ಧ್ವನಿ 40 ಸೆಕೆಂದುಗಳು

ಸ್ವಚ್ಛತೆಯೆಡೆಗೆ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಮತ್ತೊಂದು ದಿಟ್ಟ ಹೆಜ್ಜೆ ಇರಿಸಿದೆ. ಸ್ವಚ್ಛ ಭಾರತ ಮಿ ೕನ್ – 2.ಓ ತರಬೇತಿ ಶಿಬಿರಕ್ಕೆ, ಅವಳಿ ನಗರದ ಜನರಿಂದ, ಉತ್ತಮ ಪ್ರತಿಕ್ರಿಯೆ ದೊರೆತಿದೆ. ವಿಶೇ ೕ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಶಿಬಿರದಲ್ಲಿ, ನಗರದ ಸ್ವಚ್ಛತೆಯಲ್ಲಿ ನಾಗರಿಕರ ಪಾತ್ರ, ವೈಜ್ಞಾನಿಕ ತ್ಯಾಜ್ಯ ನಿರ್ವಹಣೆ ಬಗ್ಗೆ, ತರಬೇತಿ ನೀಡಲಾಯಿತು. ಬದಲಾವಣೆಗೆ ಮುಂದಾದ, ಪ್ರತಿಯೊಬ್ಬರಿಗೂ, ಪಾಲಿಕೆ ಅಭಿನಂದನೆ ಸಲ್ಲಿಸಿದೆ.

<><><>

ಹುಬ್ಬಳ್ಳಿ – ಬೆಳಗಾವಿ – ಪುಣೆ ಮಧ್ಯೆ ಸಂಚರಿಸುವ, 'ವಂದೇ ಭಾರತ' ರೈಲನ್ನು, ಘಟಪ್ರಭಾ ರೈಲು ನಿಲ್ದಾಣದಲ್ಲಿ, ಪ್ರಯಾಣಿಕರ ಅನುಕೂಲತೆ ದೃಷ್ಟಿಯಿಂದ, ಮರು ನಿಲುಗಡೆಗೆ ಅವಕಾಶ ಕಲ್ಪಿಸುವಂತೆ, ರೇಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರೇಲ್ವೆ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಅವರಿಗೆ, ಬೆಳಗಾವಿ ಸಂಸದ, ಜಗದೀಶ ಶೆಟ್ಟರ, ಪತ್ರದ ಮೂಲಕ, ಮನವಿ ಮಾಡಿದ್ದಾರೆ.

<><><>

ಮಂಡ್ಯ ಜಿಲ್ಲೆ, ಮಳವಳ್ಳಿಯಲ್ಲಿ, ಶಿವರಾತ್ರೀಶ್ವರ ಶಿವಯೋಗಿಗಳ, ಸಾವಿರದ 66ನೇ ಜಯಂತ್ಯುತ್ಸವ, ಬರುವ 17 ರಂದು, ಆಯೋಜಿತವಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಭಾಗವಹಿಸಲಿದ್ದಾರೆ. ಜಿಲ್ಲಾಧಿಕಾರಿ ಕುಮಾರ, ತಮ್ಮ ಕಚೇರಿಯಲ್ಲಿ,

ಪೂರ್ವಭಾವಿ ಸಿದ್ಧತಾ ಸಭೆ ನಡೆಸಿದರು. ಸೂಕ್ತ ಭದ್ರತಾ ವ್ಯವಸ್ಥೆ, ಅತಿಥಿ ಗೃಹದಲ್ಲಿ, ಸಕಲ ಸೌಲಭ್ಯಗಳನ್ನು ಖಾತ್ರಿ ಪಡಿಸುವಂತೆ, ವಿವಿಧ ಇಲಾಖೆಗಳ ಅಧಿಕಾರಿಗಳಿಗೆ, ಸೂಚಿಸಿದರು.

<><><>

ಕೃತಕ ಬುದ್ಧಿಮತ್ತೆ ತಂತ್ರಜ್ಞಾನ, ತಂತ್ರಜ್ಞರು ನಿರ್ವಹಿಸಬಹುದಾದ, ಶೇಕಡ 20ರಷ್ಟು ಕೆಲಸಗಳನ್ನು, ಪೂರೈಸಬಲ್ಲದು ಎಂದು, ಬೆಳಗಾವಿಯ, ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ, ಉಪ ಕುಲಪತಿ, ಎಸ್. ವಿದ್ಯಾಶಂಕರ, ಅಭಿಪ್ರಾಯಪಟ್ಟಿದ್ದಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಸಮಾರೋಪಗೊಂಡ, ಎರಡು ದಿನಗಳ, ರಾಷ್ಟ್ರೀಯ, ಕೃಷಿ ಸ್ಟಾರ್ಟ ಅಪ್ ಎಕ್ಸಪೋ, 3ನೇ ಆವೃತ್ತಿಯಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. 13 ಸಾವಿರಕ್ಕೂ ಹೆಚ್ಚು ಜನ, ಈ ಮೇಳಕ್ಕೆ ಭೇಟಿ ನೀಡಿದ್ದಾರೆ, 125 ಕೃಷಿ ನವೋದ್ಯಮಿಗಳು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

136 ನೋಂದಾಯಿತ ನವೋದ್ಯಮಗಳು, ಹೊಸ ದಿಲ್ಲಿ, ಮಧ್ಯಪ್ರದೇಶ ಸೇರಿದಂತೆ, 8 ರಾಜ್ಯಗಳಿಂದ, ಕೃಷಿ ಸ್ಟಾರ್ಟ್ ಅಪ್ ಎಕ್ಸಪೋದಲ್ಲಿ, ಭಾಗವಹಿಸಿದ್ದವು.

<><><>

ಯಾದಗಿರಿ ಜಿಲ್ಲೆಯಾದ್ಯಂತ, ಈ ತಿಂಗಳ 21 ರಿಂದ 24ರ ವರೆಗೆ, ರಾಷ್ಟ್ರೀಯ ಪಲ್ಸ್ ಪೋಲಿಯೋ ನೀಡಿಕೆ ಅಭಿಯಾನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆಯೋಜಿಸಿದೆ. ಐದು ವರ್ಷದೊಳಗಿನ ಮಕ್ಕಳಿಗೆ, ಪೋಲಿಯೋ ಲಸಿಕೆ ನೀಡಲಾಗುವುದು ಎಂದು, ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ತಿಳಿಸಿದ್ದಾರೆ.

<><><>

ಯಾದಗಿರಿಯ, ಯಿಮ್ಸ್ ತಾಯಿ–ಮಗುವಿನ ಆಸ್ಪತ್ರೆಯಲ್ಲಿ, ಹೆರಿಗೆ ವೇಳೆ, ಶಿಶು ಸಾವು ಗಂಭೀರ ಪ್ರಕರಣದ ಕುರಿತು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ. ಘಟನೆಯ ಕುರಿತು, ಮುಂದಿನ ಏಳು ದಿನಗಳಲ್ಲಿ, ಸಮಗ್ರ ವರದಿ ಸಲ್ಲಿಸುವಂತೆ, ಆಯೋಗದ ರಾಜ್ಯ ಅಧ್ಯಕ್ಷ, ಶಶಿಧರ ಕೋಸಂಬೆ ಜಿಲ್ಲಾಡಳಿತಕ್ಕೆ, ಸೂಚಿಸಿದ್ದಾರೆ

<><><>

ಕೇಂದ್ರ ಸರ್ಕಾರ, ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ, ಪ್ರತಿ ಕ್ವಿಂಟಾಲ್ ರಾಗಿಗೆ, 4 ಸಾವಿರದ 886 ರೂಪಾಯಿ ದರ, ನಿಗದಿ ಪಡಿಸಿದೆ. ಸಾಮಾನ್ಯ ಗುಣಮಟ್ಟದ ಭತ್ತ, ಪ್ರತಿ ಕ್ವಿಂಟಾಲ್‌ಗೆ, 2 ಸಾವಿರದ 369 ರೂಪಾಯಿ, ಎ ಶ್ರೇಣಿ ಭತ್ತಕ್ಕೆ, 2 ಸಾವಿರದ 389 ರೂಪಾಯಿ, ಬೆಂಬಲ ಬೆಲೆ ನಿಗದಿಯಾಗಿದೆ. ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮವನ್ನು ಖರೀದಿ ಏಜೆನ್ಸಿಯನ್ನಾಗಿ ನೇಮಿಸಿ, ರಾಜ್ಯ ಸರ್ಕಾರ ಆದೇಶಿಸಿದೆ.

<><><>

ಮೂಡಬಿದಿರೆಯ, ಕಾಂತಾವರ ಕನ್ನಡ ಸಂಘ, ಪ್ರಸಕ್ತ ಸಾಲಿನ, ನಾಲ್ಕು ದತ್ತಿ ನಿಧಿ ಪ್ರಶಸ್ತಿಗಳನ್ನು, ಪ್ರಕಟಿಸಿದೆ. ಬಳ್ಳಾರಿಯ, ಲೋಹಿಯಾ ಪ್ರಕಾಶನದ, ಚೆನ್ನಬಸವಣ್ಣ, ನಿವೃತ್ತ ಪ್ರಾಧ್ಯಾಪಕ, ಬೆಂಗಳೂರಿನ ಆರ್. ಲಕ್ಷ್ಮೀನಾರಾಯಣ, ಪತ್ರಕರ್ತ ಲಕ್ಷ್ಮಣ ಕೊಡಸೆ ಹಾಗೂ ಸರೋಜಿನಿ ನಾಗಪ್ಪಯ್ಯ ಈಶ್ವರಮಂಗಲ, ಅವರಿಗೆ ದತ್ತಿ ಪ್ರಶಸ್ತಿ ನೀಡಿ, ಗೌರವಿಸಲಾಗುವುದು ಎಂದು, ಕಾಂತಾವರ ಕನ್ನಡ ಸಂಘದ ಅಧ್ಯಕ್ಷ, ಹಿರಿಯ ಸಾಹಿತಿ, ನಾ. ಮೊಗಸಾಲೆ ತಿಳಿಸಿದ್ದಾರೆ.

<><><>

ಖ್ಯಾತ ನಾಟಕಕಾರ, ಕಂದಗಲ್ಲ ಹನುಮಂತರಾಯರ, 7 ನಾಟಕಗಳನ್ನು, ಆಧುನಿಕ ರಂಗಭೂಮಿಗೆ ಅಳವಡಿಸಲಾಗಿದ್ದು, ಬರುವ 24 ನೇ ತಾರೀಖು, ಧಾರವಾಡದ ಸೃಜನಾ ರಂಗಮಂದಿರದಲ್ಲಿ, ಪ್ರದರ್ಶಿಸಲಾಗುತ್ತಿದೆ. ಧಾರವಾಡ ರಂಗಾಯಣದ ಆಡಳಿತಾಧಿಕಾರಿ, ಶಶಿಕಲಾ ಹುಡೇದ ಮಾಹಿತಿ ನೀಡಿ, 'ಕಂದಗಲ್ಲರಿಗೆ ನಮಸ್ಕಾರ, ಅರ್ಥಾತ್ ಕಂದಗಲ್ಲ ಭಾರತ' ಎಂಬ, ಮೂರು ಗಂಟೆಗಳ ನಾಟಕ ಪ್ರದರ್ಶನ ಗೊಳ್ಳಲಿದೆ, ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.